**KAMS610022922025**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

ದಿನಾಂಕ 02 ನೇ ಏಪ್ರಿಲ್ 2026.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 1034/2025**

ಪಿರ್ಯಾದಿದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
( ಸಹಾಯಕ ಸರ್ಕಾರಿ ಅಭಿಯೋಜಕರವರಿಂದ )

**ವಿರುದ್ಧ**

ಆರೋಪಿಗಳು :

1. ಆಕಾಶ ಎಸ್ ಬಿನ್ ಲೇ.ಸೀನಾ ಬೋವಿ,
ವಯಸ್ಸು 22 ವರ್ಷ,

2. ಬಾಲು ಉಃ ಬಾಲಕೃಷ್ಣ ಕೆ.ಎಸ್,
ಬಿನ್ ಲೇ.ಸಿದ್ದಲಿಂಗಾಬೋವಿ,
ವಯಸ್ಸು 42 ವರ್ಷ,

3. ಜಲೇಂದ್ರ ಬಿನ್ ತಿಮ್ಮಬೋವಿ,
ವಯಸ್ಸು 37 ವರ್ಷ,

4. ಕುಮಾರ ಬಿನ್ ದಾಸಬೋವಿ,
ವಯಸ್ಸು 33 ವರ್ಷ,

5. ಶಾರಾದ ಬಿನ್ ಲೇ.ಸೀನಾಬೋವಿ,
ವಯಸ್ಸು 36 ವರ್ಷ,

6. ಸುಬ್ಬಮ್ಮ ಕೋಂ ದಾಸಬೋವಿ,
ವಯಸ್ಸು 53 ವರ್ಷ,

7. ಗೀತಾ ಕೋಂ ಮಹಾದೇವ,
ವಯಸ್ಸು 43 ವರ್ಷ,

ಆ-1 ರಿಂದ 7 ರವರ ವಾಸಃ
ಮಾಕನಹಳ್ಳಿ ಪಾಳ್ಯ ಗ್ರಾಮ,
ಪಿರಿಯಾಪಟ್ಟಣ ಲ್ಲೂಕು,
ಮೈಸೂರು ಜಿಲ್ಲೆ.

*(ಆರೋಪಿಗಳ ಪರವಾಗಿ ಶ್ರೀ **ಕೆ.ಆರ್.ವಿ.**, ವಕೀಲರು )*

| | | | |
|---|---|---|---|
| 1. | ಕೃತ್ಯ ನಡೆದ ದಿನಾಂಕ | : | 29.05.2024 |
| 2. | ಕೃತ್ಯ ವರದಿ ಮಾಡಿದ ದಿನಾಂಕ | : | 30.05.2024 |
| 3. | ದೂರುದಾರರ ಹೆಸರು | : | ಚಿಕ್ಕಮ್ಮ |
| 4. | ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 13.02.2026 |
| 5. | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 13.02.2026 |
| 6. | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.143, 148 ಹಾಗೂ 448, 504, 323, 427, 506 |

ಮತ್ತು 114 ಸಹವಾಚಕ 149.

**7.** ನ್ಯಾಯಾಲಯದ ತೀರ್ಮಾನ : ನಿರ್ದೋಷಿಗಳು.

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ತೀರ್ಪು :-**

ಪಿರಿಯಾಪಟ್ಟಣ ಪೊಲೀಸ್ ಉಪ ನಿರೀಕ್ಷಕರು, ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ.143, 148 ಹಾಗೂ 448, 504, 323, 427, 506 ಮತ್ತು 114 ಸಹವಾಚಕ 149 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. **ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ** :-

ದಿನಾಂಕ 29.05.2024 ರಂದು ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಪಿರಿಯಾಪಟ್ಟಣ ತಾಲ್ಲೂಕು ಮಾಕನಹಳ್ಳಿ ಪಾಳ್ಯದ ಚಾಸಾ.3 ಪುಟ್ಟಯ್ಯ ರವರ ಬಾಬ್ತು ಚಿಲ್ಲರೆ ಅಂಗಡಿ ಮಳಿಗೆಯಲ್ಲಿ, ಚಾಸಾ.1 ಚಿಕ್ಕಮ್ಮ ರವರು ವ್ಯಾಪಾರ ಮಾಡುತ್ತಿದ್ದಾಗ, 1 ರಿಂದ 7 ನೇ ಆರೋಪಿಗಳು

ಚಿಲ್ಲರೆ ಅಂಗಡಿಯ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನುಂಟು ಮಾಡಿರುತ್ತಾರೆ. ನಂತರ 3 ರಿಂದ 7ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರ ಚಿಲ್ಲರೆ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿ, 5 ರಿಂದ 7ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರನ್ನು ಅಂಗಡಿಯಿಂದ ಹೊರಗೆ ಎಳೆದುಕೊಂಡು ಬಂದು, ಏನೇ ಮುಂಡೆ, ನಿನ್ನ ಗಂಡ ಏಲ್ಲಿ, ನಮ್ಮ ಹುಡುಗರಿಗೆ ಹೊಡೆದು ಆಸ್ಪತ್ರೆಗೆ ಸೇರಿಸುತ್ತೀರಾ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ.

ನಂತರ 5 ರಿಂದ 7ನೇ ಆರೋಪಿಗಳು ತಮ್ಮ ಕೈಗಳಿಂದ ಚಾಸಾ.1 ಚಿಕ್ಕಮ್ಮ ರವರ ಮೈಕೈಗೆ ಹೊಡೆದಿದ್ದು, 3ನೇ ಮತ್ತು 4ನೇ ಆರೋಪಿಗಳು ಅಂಗಡಿಗೆ ನುಗ್ಗಿ ಅಂಗಡಿಯಲ್ಲಿದ ಬೀಡಿ ಬಂಡಲ್ ಗಳು ಹಾಗೂ ಸಾಮಾನುಗಳನ್ನು ಚೆಲ್ಲಾಡಿರುತ್ತಾರೆ. 3ನೇ ಆರೋಪಿಯು ಸಿಸಿಟಿವಿ ಕ್ಯಾಮರಾವನ್ನು ಕೈ ನಿಂದ ಕಿತ್ತು, ನೆಲಕ್ಕೆ ಬಡಿದು ಹೊಡೆದು ಹಾಕಿದ್ದು, ಇದರಿಂದ ಚಾಸಾ.1 ಚಿಕ್ಕಮ್ಮ ರವರಿಗೆ ಸುಮಾರು 25,000/- ಗಳಷ್ಟು ನಷ್ಟವಾಗಿರುತ್ತದೆ. ನಂತರ 3 ರಿಂದ 7ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರಿಗೆ, ನಮ್ಮ ತಂಟೆಗೆ ಬಂದರೆ ನಿನನ್ನು ಹಾಗೂ ನಿಮ್ಮ ಮನೆಯವರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡುವುದಾಗಿ ಪ್ರಾಣಾ ಬೆದರಿಕೆ ಹಾಕಿರುತ್ತಾರೆ. 1ನೇ ಮತ್ತು 2ನೇ ಆರೋಪಿಗಳು, 3ನೇ ಆರೋಪಿಗೆ ಸಿಸಿಟಿವಿ ಕ್ಯಾಮರವನ್ನು ಹೊಡೆದು ಹಾಕಲು ಹಾಗೂ

ಮೇಲ್ಕಂಡ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿರುತ್ತಾರೆಂದು ಆರೋಪಿಗಳ ವಿರುದ್ಧ ಪಿರಿಯಾಪಟ್ಟಣ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಪೊಲೀಸ್ ಉಪ ನಿರೀಕ್ಷಕರು, ಚಾಸಾ.8 ಲಿಂಗಾರಾಜು ಡಿ ರವರು, ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ಚಿಕ್ಕಮ್ಮ ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆಃ130/2024 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ದೋಷಾರೋಪಣೆಯನ್ನು

ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ ಸಂಹಿತೆ ಕಲಂ.143, 148 ಹಾಗೂ 448, 504, 323, 427, 506 ಮತ್ತು 114 ಸಹವಾಚಕ 149 ರಡಿಗಳಲ್ಲಿ ಶಿಕ್ಷಿಸಬಹುದಾದ ದೋಷಾರೋಪಣೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿಗಳ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 8 ಸಾಕ್ಷಿಗಳ ಪೈಕಿ ದೂರುದಾರರಾದ ಚಾಸಾ.1 ಚಿಕ್ಕಮ್ಮ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 3 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಸಾಕ್ಷ್ಯದಲ್ಲಿ, ಆರೋಪಿಗಳಿಗೆ ವ್ಯತಿರಿಕ್ತವಾದ ಯಾವುದೇ ಸಂದರ್ಭಗಳು ಕಂಡುಬಾರದ ಕಾರಣ, ಆರೋಪಿಗಳನ್ನು ದಂ.ಪ್ರ.ಸಂ.ಕಲಂ.313 ರಡಿ ವಿಚಾರಣೆ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

## ಅಂಶಗಳು

**1.** ದಿನಾಂಕ 29.05.2024 ರಂದು ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಪಿರಿಯಾಪಟ್ಟಣ ತಾಲ್ಲೂಕು ಮಾಕನಹಳ್ಳಿ ಪಾಳ್ಯದ ಚಾಸಾ.3 ಪುಟ್ಟಯ್ಯ ರವರ ಬಾಬ್ತು ಚಿಲ್ಲರೆ ಅಂಗಡಿ ಮಳಿಗೆಯಲ್ಲಿ, ಚಾಸಾ.1 ಚಿಕ್ಕಮ್ಮ ರವರು ವ್ಯಾಪಾರ ಮಾಡುತ್ತಿದ್ದಾಗ, 1 ರಿಂದ 7 ನೇ ಆರೋಪಿಗಳು ಚಿಲ್ಲರೆ ಅಂಗಡಿಯ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.143 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ ಚಿಲ್ಲರೆ ಅಂಗಡಿ ಮಳಿಗೆಯ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.148 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ, ಅವರ ಪೈಕಿ 3 ರಿಂದ 7 ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರ

ಚಿಲ್ಲರೆ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.448 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ, ಅವರ ಪೈಕಿ 5 ರಿಂದ 7 ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರನ್ನು ಅಂಗಡಿಯಿಂದ ಹೊರಗೆ ಎಳೆದುಕೊಂಡು ಬಂದು, ಅವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಏನೇ ಮುಂಡೆ, ನಿನ್ನ ಗಂಡ ಎಲ್ಲಿ, ನಮ್ಮ ಹುಡುಗರಿಗೆ ಹೊಡೆದು ಆಸ್ಪತ್ರೆಗೆ ಸೇರಿಸುತ್ತೀರಾ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ, ಅವರ ಪೈಕಿ 5 ರಿಂದ 7 ನೇ ಆರೋಪಿಗಳು ತಮ್ಮ ಕೈಗಳಿಂದ ಚಾಸಾ.1 ಚಿಕ್ಕಮ್ಮ ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**6.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ, ಅವರ ಪೈಕಿ 3 ನೇ ಮತ್ತು 4 ನೇ ಆರೋಪಿಗಳು ಅಂಗಡಿಗೆ ನುಗ್ಗಿ ಅಂಗಡಿಯಲ್ಲಿದ ಬೀಡಿ ಬಂಡಲ್ ಗಳು ಹಾಗೂ ಸಾಮಾನುಗಳನ್ನು ಚೆಲ್ಲಾಡಿದ್ದು ಹಾಗೂ 3 ನೇ ಆರೋಪಿಯು ಸಿಸಿಟಿವಿ ಕ್ಯಾಮರಾವನ್ನು ಕೈ ನಿಂದ ಕಿತ್ತು, ನೆಲಕ್ಕೆ ಬಡಿದು ಹೊಡೆದು ಹಾಕಿದ್ದು, ಇದರಿಂದ ಚಾಸಾ.1 ಚಿಕ್ಕಮ್ಮ ರವರಿಗೆ ಸುಮಾರು 25,000/- ಗಳಷ್ಟು ನಷ್ಟವಾಗಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**7.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ 3 ರಿಂದ 7 ನೇ ಆರೋಪಿಗಳು ಚಾಸಾ.1 ಚಿಕ್ಕಮ್ಮ ರವರಿಗೆ, ತಮ್ಮ ತಂಟೆಗೆ ಬಂದರೆ ನಿನನ್ನು ನಿಮ್ಮ ಮನೆಯವರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡುವುದಾಗಿ ಪ್ರಾಣಾ ಬೆದರಿಕೆ ಹಾಕಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**8.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ, 1 ನೇ ಮತ್ತು 2 ನೇ ಆರೋಪಿಗಳು, 3 ನೇ ಆರೋಪಿಗೆ ಸಿಸಿಟಿವಿ ಕ್ಯಾಮರಾವನ್ನು ಹೊಡೆದು ಹಾಕಲು ಹಾಗೂ ಮೇಲ್ಕಂಡ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿದ್ದು, ಆ

ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**9.** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 8 : **"ನಕಾರಾತ್ಮಕವಾಗಿ"**

ಅಂಶ-9 : ಅಂತಿಮ ಆದೇಶದಂತೆ,

ಈ ಕೆಳಕಂಡ,

**ಕಾ ರ ಣ ಗ ಳು**

**ಅಂಶ-1 ರಿಂದ 8 :-**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ಪರಿಗಣಿಸಲಾಗಿದೆ.

**10.** ಮಾನ್ಯ ಅಭಿಯೋಜನೆಯು ತಮ್ಮ ದೋಷಾರೋಪಣೆಯನ್ನು ಸಾಭೀತುಪಡಿಸಲು ಈ ಪ್ರಕರಣದ ದೂರುದಾರರಾದ ಚಾಸಾ.1 ಚಿಕ್ಕಮ್ಮ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ

ವಿಷಯ ತನಗೆ ಗೊತ್ತಿಲ್ಲ. ಆರೋಪಿಗಳು ತನ್ನೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ತನ್ನನ್ನು ಅಂಗಡಿಯಿಂದ ಹೊರಗೆ ಎಳೆದುಕೊಂಡು ಹೋಗಿ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ ಮೈಕೈಗೆ ಹೊಡೆದಿಲ್ಲ, ಸಿಸಿಟಿವಿ ಒಡೆದು ಹಾಕಿ ನಷ್ಟವನ್ನುಂಟು ಮಾಡಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿಲ್ಲ. ತಾನು ಪೊಲೀಸರಿಗೆ ಆರೋಪಿಗಳ ವಿರುದ್ಧ ಯಾವುದೇ ದೂರು ನೀಡಿಲ್ಲ. ದೂರನ್ನು ನಿಪಿ.1 ಎಂದು, ಮಹಜರನ್ನು ನಿಪಿ.2 ಎಂದು, ತಮ್ಮ ಸಹಿಗಳನ್ನು ನಿಪಿ.1(ಎ) ಮತ್ತು ನಿಪಿ.2(ಎ) ಎಂದು ಗುರುತಿಸಲಾಗಿದೆ. ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ.1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**11.** ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರವರೇ ಮಾನ್ಯ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗದೇ ಇರುವುದರಿಂದ, ಉಳಿದ ಎಲ್ಲ ಸಾಕ್ಷಿಗಳನ್ನು ಕೈ ಬಿಡಲಾಯಿತು. ಹೀಗಾಗಿ, ಆರೋಪಿಗಳ ವಿರುದ್ಧವಾಗಿ ಹೊರಿಸಿದ ಆರೋಪಗಳಿಗೆ ಯಾವುದೇ ಸಾಕ್ಷ್ಯವಿಲ್ಲದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿನ ಆರೋಪಿಗಳ ಹೇಳಿಕೆಯನ್ನು ಸಹ ಕೈ ಬಿಡಲಾಯಿತು. ಆದ್ದರಿಂದ, ಆರೋಪಿಗಳನ್ನು ಶಿಕ್ಷಿಸಲು ಯಾವುದೇ ಸಾಕ್ಷ್ಯವಿರುವುದಿಲ್ಲ ಮತ್ತು ಆರೋಪಿಗಳು ಖುಲಾಸೆಗೊಳ್ಳಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಪುಷ್ಠೀಕರಿಸಲು ವಿಫಲವಾಗಿದೆ ಎಂಬ ಅಭಿಪ್ರಾಯದ ಮೇರೆಗೆ, ನ್ಯಾಯಾಲಯವು ಮೇಲಿನ 1 ರಿಂದ 8 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-9 :-**

**12.** ಮೇಲಿನ ಅಂಶ-1 ರಿಂದ 8 ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ, ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ.143, 148 ಹಾಗೂ 448, 504, 323, 427, 506 ಮತ್ತು 114 ಸಹವಾಚಕ 149 ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಗಳ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್.ಸಂ.94(ಎ)/2024 ರಲ್ಲಿರುವ ಸಿಸಿಟಿವಿ ಕ್ಯಾಮರಾ ಮೌಲ್ಯವುತ್ತವಾದ ವಸ್ತುವಾದ್ದರಿಂದ, ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ದಂ.ಪ್ರ.ಸಂಹಿತೆ ಅಧ್ಯಾಯ 34ರ ರೀತ್ಯಾ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **02 ನೇ ಏಪ್ರಿಲ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ಅನುಬಂಧ :-**

**ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :-**

ಪ್ರಾಸಾ.1 - ಚಿಕ್ಕಮ್ಮ

**ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :-**

ನಿಪಿ.1 - ದೂರು

ನಿಪಿ.1(ಎ) - ಪ್ರಾಸಾ.1 ರವರ ಸಹಿ

ನಿಪಿ.2 - ಸ್ಥಳ ಮಹಜರ್

ನಿಪಿ.2(ಎ) - ಪ್ರಾಸಾ.1 ರವರ ಸಹಿ

ನಿಪಿ.3 - ಪ್ರಾಸಾ.1 ರವರ ಮುಂದುವರೆದ ಹೇಳಿಕೆ

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು : ಇಲ್ಲ**

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿದಾರರು : ಇಲ್ಲ**

**ಆರೋಪಿಗಳ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು : ಇಲ್ಲ**

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.